ಸಮಕಾಲೀನ ಪ್ರಮುಖ ಕಥೆಗಾರ್ತಿಯರಲ್ಲೊಬ್ಬರಾದ ರಶ್ಮಿ ಕೆ.ಎಂ. ಬೆಂಗಳೂರಿನ ಸೇಕ್ರೆಡ್ ಹಾರ್ಟ್ ಮಹಿಳಾ ಪದವಿ ಕಾಲೇಜಿನಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕಿ. ಕನ್ನಡ ಸಾಹಿತ್ಯದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. 'ನೆನಪುಗಳ ನೆಪದಲ್ಲಿ' ಪ್ರಕಟಿತ ಕವನ ಸಂಕಲನ. ರಶ್ಮಿಯವರ 'ಅದು' ಕಥೆ ಪ್ರಜಾವಾಣಿ 'ದೀಪಾವಳಿ ಕಥಾಸ್ಪರ್ಧೆ'ಯಲ್ಲಿ ಬಹುಮಾನ ಪಡೆದಿದೆ.

ಸುತ್ತಾಕ್ತಾರೆ. ಅದ್ರೂ ಮೊದ್ಲು ಅವೆಲ್ಲಾ ಜೋಡಿಗಳು ಮರ ಸುತ್ತವು. ಆಗ ಇದ್ದಿದ್ದ ಮಜ ಬೇರೆ. ಈಗ ನೋಡಿ ನಾನು ಅತ್ತಿತ್ತ ಅಲ್ಲಾಡದಂಗೆ ಕಲ್ಲು, ಮಣ್ಣು, ಮರಳು, ಸಿಮೆಂಟು ಅಂತ ಗಟ್ಟಿಗೆ ಕಟ್ಟಿ ಕೂರ್ಸ್ರೋರೆ. ಕತ್ತು ನೋವಾದ್ರೂ ತಿರುಗ್ಸಂಗಿಲ್ಲ. ಆಗೆಲ್ಲಾ ಮಕ್ಳು ನನ್ನ ಬೀಳಲು ಇಡ್ಕೊಂಡು ನೇತಾಡವು, ಗೆಳ್ತೀರ್ನ ಕಳ್ಕೊಂಡ ಜೀವಕ್ಕೆ ಹಾಯನ್ಸೋದು. ಕೊರಳಿಗೆ ಜೋತುಬಿದ್ದ ಮಕ್ಳು ತರ. ಈಗ ಪೂಜೆ ಮಾಡೋ ಮರ ಅಂತ, ದೇವ್ರು ಅಂತ ಆ ಮಕ್ಳಿಗೂ ಆಡಕೆ ಬಿಡಲ್ಲ. ಮೊದ್ಲಂಗೆ ಅಕ್ಕಿ-ಪಕ್ಕಿಗಳೂ ಬರಲ್ಲ. ನನ್ನ ನೆರಳಲ್ಲಿ ಕಟ್ಟಕೆ ಇವ್ರ ಹತ್ರ ದನ ಎಮ್ಮೆ ಅಂತ ಇದ್ರೆ ತಾನೆ. ಯಾವಾಗಾರ ಒಂದೊಂದು ನಾಯಾರ ಬಂದು ಕಾಲೆತ್ತುತ್ತೇನೋ ಅಂದ್ರೆ, ಈ ಕಟ್ಟೆ ಮೇಲೆ ಕುತ್ಕಳೋ ಜನ ಅದುಕ್ಕೂ ಕಲ್ಲಾಕ್ತಾರೆ. ಏನ್ಮಾಡ್ಲಿ. ನಾ ಒಂಟೀ ಅಂದ್ರೆ ಒಬ್ಬಂಟಿ ಆಗ್ಬಿಟ್ಟೀನಿ. ಈಗ ಈ ಮನೆ, ಮನೆ ಕತೆಗಳನ್ನ ನೋಡ್ಕಂಡು ಯಾವಾಗ ನಂಗೂ ಸಾವು ಬರಬೋದು ಅಂತ ಕಾಯ್ಕಂಡು ನಿಂತೀನಿ. ಇದು ನನ್ ಕತೆ, ಮುಂದೆ ಏನಾರ ನೆನ್ಪಾದ್ರೆ ಏಳ್ತೀನಿ. ಈಗ ಪಾಪ ಆ ಮಕ್ಳು ಕತೆ ಕೇಳಿ. ಈ ನಡ್ಲುಮನೆ ಮುದ್ಕಪ್ಪ ಇದ್ನಲ್ಲ, ಅದೇ ನನ್ಜೊತೆ ಬೆಳ್ದೋನು, ಅವ್ನ ಕೊನೆ ಮೊಮ್ಮಗನ ಸೊಸೆಗೂ, ಬಲ್ಗಡೆ ಮನೆ ಅದೇ ಈ ಉಡ್ಗಿ ಇದಾಳಲ್ಲ ಅವಳ ಅಪ್ಪಂಗೂ ಸಂಬಂಧ ಇತ್ತು. ಅವ್ರೂ ಯಾರೂ ಇಲ್ದಾಗ, ಕತ್ಲಾದಾಗ ನಮ್ಕಡೇನೇ ಬರರು, ಹಂಗೆ ಒಂದಿನ ಬಂದಾಗ ಈ ಹುಡ್ಗ ಹುಡ್ಗೀನೂ ಇದ್ರು. ಅದುನ್ನ ಅವ್ರು ನೋಡ್ಬಿಟ್ರು. ಆಗ ಈ ನಡ್ಲು ಮನೆ ಎಂಗ್ಸು ಸುಮ್ನಿದಿದ್ರೂ ಆಗದು, ವಿಷ್ಯಾನ ಎಲ್ಲಾ ಕಡೆ ಏಳ್ಕಂಡು ಬಂದಿದ್ದೇ ಅಲ್ದೆ, ನಡ್ಲು ಮನೆಗೆ ಇದೆಲ್ಲಾ ಗೊತ್ತಿತ್ತು ಅಂತ ಆ ಹುಡ್ಗಿ ಅಪ್ಪಂಗೆ ಏಳ್ಬಿಟ್ಳು. ಅಷ್ಟೇ ಶುರುವಾತು ನೋಡಿ, ಎಲ್ಲೂ ಮನೆ ಜಗ್ಳ. ಇಬ್ರು ಜಗ್ಳ ಮೂರ್ನೇವ್ರಿಗೆ ಲಾಬ ಅಂತಾರಲ್ಲ, ಇಲ್ಲಿ ಅಂತದ್ದೇನು ಆಗ್ಲಿಲ್ಲ. ನಡ್ಲು ಮನೆನ ನಡುಕ್ಕೆ ಆಕ್ಕಂಡು ದಿನಾ ಬರೀ ಜಗ್ಳ... ಜಗ್ಳ.

ಎಡ್ಗಡೆ ಮನೇವು ಅವ್ರ ಉಡ್ಗನ ಮೇಲೆ, ಬಲ್ಗಡೆ ಮನೇವು ಅವ್ರ ಉಡ್ಗಿ ಮೇಲೆ ಕಣ್ಣಿಟ್ಟಿದ್ದೇನು, ಕಾದಿದ್ದೇನು, ಬೆದ್ರಿಕೆ ಆಕಿದ್ದೇನು ಆಂ? ಏನು ಮಾಡಿರೇನು ಮನ್ಸು ತಡ್ಕಂಡಾವ, ಎಷ್ಟು ದಿನ ಅಂತ ದೂರ ಇದ್ದಾವು? ಅವ್ರೂ ಒಂದು ದಾರಿ ಕಂಡ್ಕಂಡ್ವು. ಅದೇನಪ್ಪಾ ಅಂದ್ರೆ ಮೂರು ಮನೇಗೂ ಒಂದೊಂದು ಅಟ್ಟ ಇದ್ವು. ಈ ಉಡ್ಗ, ಉಡ್ಗಿ ಅವ್ರವ್ರ ಅಟ್ಟದ ಮೇಲೆ ಮಲ್ಗೋಕೆ ಶುರು ಮಾಡಿವು. ಎಡ್ಗಡೆ ಮನೆ ಅಟ್ಟದಿಂದ ಅವ್ನು ಮಾತಾಡದು, ಬಲ್ಗಡೆ ಮನೆ ಅಟ್ಟದಿಂದ ಇವ್ಳು ಮಾತಾಡದು. ಎಂತಾ ಮಾತವು ಅಂದ್ರೆ ಈ ಮಾತ್ಗಳ್ನ ಕೇಳೀ ಕೇಳೀ ಕೇಳ್ನಾರ್ದೆ ನಡ್ಲು ಮನೆ ಗೋಡೆ ಅದರ ಬಾಯಿ ಬಿಡ್ತು. ಅವೆಲ್ಡು ಅಲ್ಲಿ ಸೇರಕೆ ಶುರು ಮಾಡಿವು. ಕೊನೆಗೊಂದಿನ ನಡ್ಲು ಮನೆ ಅವ್ರಿಬ್ರಿಗು ಮದ್ವೆ ಮಾಡ್ತು, ಅಟ್ಟದಲ್ಲೇ ಅವ್ರ ಸಂಸಾರ ಶುರುವಾತು. ತಗಾ ನಡ್ಲುಮನೆ ಮೇಲೆ ಎಡ್ಗಡೆ, ಬಲ್ಗಡೆ ಮನೆ ಎರಡೂ ಕೆಂಡಕಾರಕೆ ನಿಂತ್ಕಂಡು. ಅಟ್ಟದ ಮೇಲಿನ ಸಂಸಾರ ಬೆಳೀತಾ ಬೆಳೀತಾ ಅಂಗೆ ನಡ್ಲು ಮನೆ ಮೇಲೆ ಮನೆ ಕಟ್ಕೊಂತಾ ಓತು.



ಅಂಗೆ ಶುರ್ವಾದ ಜಗ್ಳ ದಿನಾ ದಿನಾ ನಡಿತಾನೇ ಓತು. ಎಡ್ಗಡೆ ಮನೇವು ನೀರು ತರಾತಕೆ ಬಲ್ಗಡೆ ಮನೇವು ಓಗಲ್ಲ, ಅವು ಓಗಾತಕೆ ಇವು ಓಗಲ್ಲ ಅಂತ ಅಲ್ಲಿದ್ದಿದ್ದ ಕೆರೆ, ಬಾವೀನೆಲ್ಲಾ ಭಾಗ ಮಾಡ್ಕಂಡ್ವು. ನಡ್ಲು ಮನೇವು ಎಲ್ಡೂ ಕಡೀಕೂ ಅಲ್ಲು ಬಿಟ್ಕಂಡು ಓಗಿ ನೀರು ಸೇದ್ಕಂಡು ಬರವು. ಮೊದ್ಲು ಊರಲ್ಲಿ ಎಣ್ಣು ದೇವ್ರಿಗೊಂದು, ಗಂಡು ದೇವ್ರಿಗೊಂದು ಅಂತ ಎಲ್ಡೇ ಗುಡಿ ಇದ್ವು. ಬೇಗ ಎದ್ದ ಮನೇರು ಓಗಿ ಮುಕ ತಕ್ಕಂಡು ಗುಡಿ ಸುತ್ತಾಮುತ್ತಾ ನೀರಾಕಿ, ದೇವ್ರು ತೊಳ್ದು ಎಳ್ಡು ಊವಾಕಿ ಬರದು, ಉಳ್ದೋರೋಗಿ ಕೈ ಮುಗಿಯದು ಅಷ್ಟೆ. ಆದ್ರೆ ಆಮೇಲೇನಾತು ಇವ್ನು ಪೂಜೆ ಮಾಡಿರೋ ದೇವ್ರಿಗೆ ನಾನ್ಯಾಕೆ ಕೈ ಮುಗಿಯನ, ಅವ್ನು ಪೂಜೆ